# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 305
ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ).
ಉತ್ತರಿಸುವ ದಿನಾಂಕ : 12.07.2018.
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ನಗರ ಪ್ರದೇಶದ ಕೆಲ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆಯಷ್ಟೇ ಮಕ್ಕಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮಕ್ಕಳನ್ನು ಸರ್ಕಾರಿ ಶಾಲೆಗಳತ್ತ ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಹೌದು.<br>ಮಕ್ಕಳನ್ನು ಸರ್ಕಾರಿ ಶಾಲೆಗಳತ್ತ ಆಕರ್ಷಿಸಲು ಕೈಗೊಂಡಿರುವ ಕಾರ್ಯಕ್ರಮಗಳ ವಿವರವನ್ನು ಅನುಬಂಧ-1ರಲ್ಲಿರಿಸಿದೆ. |
| ಆ) | ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶದಲ್ಲಿ 10 ವರ್ಷಗಳಿಂದ ಬೀದರ್ ಜಿಲ್ಲೆಯ ಸಾಧನೆಯಲ್ಲಿ ಕಡಿಮೆಯಾಗಿದ್ದು, ಜಿಲ್ಲೆಯಲ್ಲಿ ಫಲಿತಾಂಶ ಹೆಚ್ಚಳಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; | ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಹೆಚ್ಚಳಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ. ವಿವರಗಳನ್ನು ಅನುಬಂಧ-2ರಲ್ಲಿರಿಸಿದೆ. |
| ಇ) | ಬೀದರ್ ಜಿಲ್ಲೆಯಲ್ಲಿ ಪ್ರಾಥಮಿಕ ಹಂತದಲ್ಲೇ ಶೈಕ್ಷಣಿಕ ಗುಣಮಟ್ಟವನ್ನು ವೃದ್ಧಿಸಲು ಕ್ರಮ ಕೈಗೊಳ್ಳಲಾಗಿದೆಯೇ? | ಈ ಜಿಲ್ಲೆಯಲ್ಲಿ ಪ್ರಾಥಮಿಕ ಹಂತದಲ್ಲೇ ಶೈಕ್ಷಣಿಕ ಗುಣಮಟ್ಟವನ್ನು ವೃದ್ಧಿಸಲು ಕ್ರಮ ಕೈಗೊಳ್ಳಲಾಗಿದೆ. (ವಿವರಗಳನ್ನು ಅನುಬಂಧ-3ರಲ್ಲಿರಿಸಿದೆ) |

(ಸಂಖ್ಯೆ: ಇಡಿ 376 ಎಸ್‌ಇಎಸ್ 2018)

(ಎನ್.ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

## ಅನುಬಂಧ-1

## ಮಕ್ಕಳನ್ನು ಸರ್ಕಾರಿ ಶಾಲೆಗಳತ್ತ ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳು

1)ವಿಶೇಷ ದಾಖಲಾತಿ ಆಂದೋಲನದ ಕಾರ್ಯಕ್ರಮದಿಂದ ಶಾಲೆಗೆ ಆಕರ್ಷಿಸಲು ಕ್ರಮ ಕೈಗೊಳ್ಳಲಾಗಿದೆ.

2)ಶಾಲೆಯ ಶಿಕ್ಷಕರು ಮನೆ ಮನೆಗೆ ತೆರಳಿ ಮಕ್ಕಳ ಪಾಲಕರ ಮನವೊಲಿಸಿ ಮಕ್ಕಳನ್ನು ಶಾಲೆಗೆ ಬರುವಂತೆ ಸಂದರ್ಶನ ಕೈಗೊಂಡು ಅರಿವು ಮೂಡಿಸಲಾಗಿದೆ.

3)ಸಮವಸ್ತ್ರ, ಪಠ್ಯ ಪುಸ್ತಕ, ಕ್ಷೀರಭಾಗ್ಯ, ಅಕ್ಷರದಾಸೋಹ, ಹೆಣ್ಣು ಮಕ್ಕಳಿಗೆ ಹಾಜರಾತಿ ಪ್ರೋತ್ಸಾಹ ಧನ ನೀಡುವುದು ಹಾಗೂ ಒಂದನೇ ತರಗತಿಯಿಂದ ಆಂಗ್ಲ ಭಾಷೆಯನ್ನು ಬೋಧಿಸಲಾಗುತ್ತಿದೆ.

ನಿರ್ದೇಶಕರು,
ಕಲಬುರಗಿ ವಿಭಾಗ, ಕಲಬುರಗಿ.

# ಅನುಬಂಧ-2

## ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಹೆಚ್ಚಳಕ್ಕೆ ಸರ್ಕಾರ ಕೈಗೊಂಡ ಕ್ರಮಗಳು

1) ಮಕ್ಕಳ ಅರಿವಿನ ಮಟ್ಟವನ್ನು ಅರಿತು ಬೋಧಿಸುವ ಕಾರ್ಯಕ್ರಮ; ಮುಖ್ಯ ಗುರುಗಳ ಸಭೆ ಮತ್ತು ವಿಷಯ ಶಿಕ್ಷಕರ ಕಾರ್ಯಗಾರ; ನುರಿತ ಶಿಕ್ಷಕರಿಂದ ವಿಷಯ ಶಿಕ್ಷಕರಿಗೆ ಬೋಧನೆ ಮಾಡಲಾಗಿದೆ ಹಾಗೂ ವಿಶೇಷ ತರಬೇತಿ ನಡೆಸಲು ಸಲಹೆ ಸೂಚನೆ ಮತ್ತು ಪ್ರೋಜೆಕ್ಟರ್/ಪವರ ಪಾಂಯಿಟ್ ಮೂಲಕ ಮುಖ್ಯ ಶಿಕ್ಷಕರಿಗೆ ವಿಷಯ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.

2) (ಅ)ಸಮಯ ಪಾಲನೆ (ಆ).ಸ್ವಯಂ ಶಿಸ್ತು (ಇ).ಅಭಿವೃದ್ಧಿಪರ ಚಿಂತನೆ ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ಡಾ.ಗುರುರಾಜ ಕರ್ಜಗಿ ಹಾಗೂ ಶಾಂತಿ ದೇಸಾಯಿ ಇವರಿಂದ ಜಿಲ್ಲೆಯ ಎಲ್ಲಾ ಪ್ರೌಢ ಶಾಲೆಗಳ ಮಕ್ಕಳಿಗೆ, ಶಿಕ್ಷಕರಿಗೆ ವಿಶೇಷ ಕಾರ್ಯಾಗಾರ ಮೂಲಕ ತರಬೇತಿ ನೀಡಲಾಗಿದೆ. (ಈ).ಶಾಲೆಯ ಪರಿಣಾಮಕಾರಿ ಬೋಧನೆಯಲ್ಲಿ ಭಾಗಿಯಾಗಿ ಶಿಕ್ಷಕರಿಗೂ ಪ್ರೇರಣೆ ನೀಡುವುದು (ಉ).ಶಿಕ್ಷಕರು/ಅಧಿಕಾರಿಗಳಿಗೆ ಹೊಣೆಗಾರಿಕೆಯ ಹಂಚಿಕೆ ಮಾಡಲಾಗಿದೆ. (ಊ).ಶಿಕ್ಷಕರಿಕೆ ಸಕಾಲಕ್ಕೆ ಮಾರ್ಗದರ್ಶನ (ಋ).ಕಲಿಕೆಯಲ್ಲಿ ಅರ್ಥ ಪೂರ್ಣ (ಎ).ಗುಂಪು ಚರ್ಚೆ, ಹಿಂದುಳಿದ ಮಕ್ಕಳ ಬಗ್ಗೆ ವಿಶೇಷ ಕಾಳಜಿವಹಿಸುವುದು (ಏ).ವಿನೂತನ ಬೋಧನ ವಿಧಾನಗಳ ಅಳವಡಿಕೆ (ಐ).ಓದಿದ್ದನ್ನು ಕಲಿತಿದ್ದನ್ನು ತಿಳಿದುಕೊಂಡ ಬಗ್ಗೆ ಖಾತರಿ ಪಡಿಸುವುದು. 3)

3) ವಿಷಯವಾರು ಶಿಕ್ಷಕರಿಗೆ ತರಬೇತಿ ನಲಿ-ಕಲಿ ಮತ್ತು ಕಲಿ-ನಲಿ ಬಿಆರ್‌ಪಿಗಳಿಗೆ ತರಬೇತಿ ಮತ್ತು ಸಮೂಹ ಸಂಪನ್ಮೂಲ ತರಬೇತಿ ಹಾಗೂ ಕ್ಲಸ್ಟರ್ ವಲಯವಾರು ಶಿಕ್ಷಕರಿಗೆ ತರಬೇತಿ ಹಾಗೂ ಸಲಹೆ ಸೂಚನೆ ನೀಡಲಾಗಿದೆ.

4) ಪ್ರಾಥಮಿಕ ಶಾಲೆಗಳಲ್ಲಿ ವಿಷಯವಾರು ಶಿಕ್ಷಕರ ನೇಮಕಾತಿ.

5) ಡಯಟ್ ಮೂಲಕ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲೀಷ ಭೋದನೆಗಾಗಿ ವಿಶೇಷ ತರಬೇತಿ ನೀಡಲಾಗಿದೆ.

6) ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರತ್ಮಕ ಭೋಧನೆ.

7) ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಗುರುತಿಸಲು ಕೆ.ಎಸ್.ಕ್ಯೂ.ಎ. ಪರೀಕ್ಷೆಗಳನ್ನು ನಡೆಸಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಗಮನ ನೀಡಿ ಕಲಿಕೆಯನ್ನು ಪರಿಣಾಮಕಾರಿಗೊಳಿಸಲಾಗುತ್ತಿದೆ.

ನಿರ್ದೇಶಕರು,
ಕಲಬುರಗಿ ವಿಭಾಗ, ಕಲಬುರಗಿ.

## ಅನುಬಂಧ-3

### ಪ್ರಾಥಮಿಕ ಹಂತದಲ್ಲೇ ಶೈಕ್ಷಣಿಕ ಗುಣ ಮಟ್ಟವನ್ನು ವೃಧ್ಧಿಸಲು ಕೈಗೊಂಡ ಕ್ರಮಗಳು

1) ಸ್ಪಷ್ಟ ಓದು ಶುದ್ಧಬರಹ. ಶಿಕ್ಷಕರಿಗೆ ವಿಶೇಷ ಕಾರ್ಯಗಾರವನ್ನು ನಡೆಸಿ, ಮಕ್ಕಳಿಗೆ ಚಟುವಟಿಕೆ ಆಧಾರಿತ ಬೋಧನಾ ಕ್ರಮವನ್ನು ಕೈಗೊಳ್ಳಲು ಮರ್ಗದರ್ಶನ ಮಾಡಲಾಗಿದೆ.

2) ಮುಖ್ಯಗುರುಗಳು ಎಲ್ಲಾ ವಿಷಯಗಳು ಸೇರಿದಂತೆ ವೇಳಾಪಟ್ಟಿಯನ್ನು ತಯಾರಿಸಿಕೊಂಡು ಮುಂಜಾನೆ 8.30 ರಿಂದ 9.30 ರವರೆಗೆ 6 ರಿಂದ 10 ನೇ ತರಗತಿಯಲ್ಲಿ ಪ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರಾತ್ಮಕ ವಿಶೇಷ ತರಗತಿಗಳನ್ನು ನಡೆಸಿ ಬೋಧನೆ ಮಾಡಲು ಸೂಚಿಸಿದೆ.

3) ಶಿಕ್ಷಕರಿಗೆ ವಿಶೇಷ ಕಾರ್ಯಗಾರವನ್ನು ನಡೆಸಿ, ಮಕ್ಕಳಿಗೆ ಚಟುವಟಿಕೆ ಆಧಾರಿತ ಬೋಧನಾ ಕ್ರಮವನ್ನು ಕೈಗೊಳ್ಳಲು ಮಾರ್ಗದರ್ಶನ ಮಾಡಲಾಗಿದೆ.

4) ಕ್ಷೀರ ಭಾಗ್ಯ, ಅಕ್ಷರದಾಸೋಹ, ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಶೂ-ಸಾಕ್ಸ್, ಉಚಿತ ಬೈಸಿಕಲ್, ವಿದ್ಯಾರ್ಥಿನಿಯರಿಗೆ ದಾಖಲಾತಿ ಶಿಷ್ಯ ವೇತನ, ತರಬೇತಿ ಪಡೆದ ಶಿಕ್ಷಕರು, 1ನೇ ತರಗತಿಯಿಂದಲೆ ಆಂಗ್ಲ ಭಾಷಾ ವಿಷಯವನ್ನು ಪಠ್ಯದಲ್ಲಿ ಬೋಧಿಸಲಾಗುತ್ತಿದೆ. ಶಾಲಾ ಆವರಣದಲ್ಲಿ ಪೂರ್ವ ಪ್ರಾಥಮಿಕ ಶಾಲೆ ತೆರೆದು ಮಕ್ಕಳ ದಾಖಲಾತಿ ಹೆಚ್ಚಿಸುವುದು. ಶಾಲೆಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಿ ಶಾಲೆಗಳನ್ನು ಸಬಲೀಕರಣಗೊಳಿಸುವುದು ಹಾಗೂ ಹೊಸ ತಂತ್ರಜ್ಞಾನವನ್ನು ಅಳವಡಿಸಿ ಸರ್ಕಾರಿ ಶಾಲೆಗಳನ್ನು ಆಕರ್ಷಣೆಯಗೊಳಿಸುವುದರೊಂದಿಗೆ ಶಿಕ್ಷಕರಿಗೆ ಕಾಲ ಕಾಲಕ್ಕೆ ತರಬೇತಿಯನ್ನು ನೀಡಿ ಅಪಡೆಟ್ ಮಾಡುವುದು.

ನಿರ್ದೇಶಕರು,
ಕಲಬುರಗಿ ವಿಭಾಗ, ಕಲಬುರಗಿ.